# ವಿರಾಜಪೇಟೆಯ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ ಯವರ ನ್ಯಾಯಾಲಯ

***ಸಿಸಿ:ನಂ:348`/2018***

ಪಿಡಬ್ಲ್ಯು -18

ಸಿಡಬ್ಲ್ಯು -36

| | | |
|---|---|---|
| ಸಾಕ್ಷಿದಾರರ ಹೆಸರು | : | ಎ ಕರೀಂ ರಾವುತರ್ |
| ತಂದೆಯ ಹೆಸರು | : | ಎಂ ಅಬ್ಬಾಸ |
| ವಯಸ್ಸು | : | 53 ವರ್ಷ |
| ವೃತ್ತಿ | : | ಪೊಲೀಸ್ ಇನ್ಸ್ಪೆಕ್ಟರ್ , ಲೋಕಾಯುಕ್ತ |
| ವಾಸಸ್ಥಳ | : | ಮೈಸ |

***ದಿನಾಂಕ: 12-06-2019 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.***

ಸಾಕ್ಷಿಯ ಮುಖ್ಯ ವಿಚಾರಣೆ: ಶ್ರೀ ಎಪಿಪಿಯವರಿಂದ:-

ನಾನು 8.11.16 ರಿಂದ 5.8.17 ರವರೆಗೆ ಡಿಸಿಐಬಿ ಕೊಡಗು ಕಚೇರಿಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ:12.5.17 ರಂದು ಮಾನ್ಯ ಎಸ್ಪಿಯವರ ಆದೇಶದ ಮೇರೆಗೆ ದಿ:18.5.2017 ರಂದು ಈ ಪ್ರಕರಣದ ಮುಂದಿನ ತನಿಖೆಯನ್ನು ಚಾಸಾ:35 ರಿಂದ ಪಡೆದಿರುತ್ತೇನೆ. ಈಪ್ರಕರಣದ 1 ನೇ ಆರೋಪಿತನ ಪತ್ತೆಗೆ ಸಿಬ್ಬಂದಿಯನ್ನು ನೇಮಿಸಿರುತ್ತೇನೆ. ದಿ:6.7.2017 ರಂದು ನಮ್ಮ ಕಚೇರಿ ಸಿಬ್ಬಂದಿಗಳು 1 ನೇ ಆರೋಪಿತನು ಪಿರಿಯಾಪಟ್ಟಣದ ಸುತ್ತ ಮುತ್ತ ಇರುವ ಮಾಹಿತಿ ಪಡೆದು ಸರಿ 7 ಗಂಟೆಗೆ ಅವನನ್ನು ವಶಕ್ಕೆ ಪಡೆದು ನನ್ನ ಮುಂದೆ ರಾ:9.00 ಗಂಟೆಗೆ ಹಾಜರುಪಾಡಿಸಿರುತ್ತರೆ. ಹಮೀದ್ರವರು 1 ನೇ ಆರೋಪಿತನನ್ನು ವಶಕ್ಕೆ ಪಡೆದ ಬಗ್ಗೆ ನಿಪಿ-31 ನ್ನು ನನಗೆ ನೀಡಿರುತ್ತಾರೆ. ಅದರಲ್ಲಿರುವ ನನ್ನ ಸಹಿಯನ್ನು ನಿಪಿ-31 ಬಿ ಎಂದು ಗುರುತಿಸಲಾಯಿತು. 1 ನೇ ಆರೋಪಿತನನ್ನು ವಿಚಾರಣೆಗೆ ಒಳಪಡಿಸಿ ಆತನ ಸ್ವಇಚ್ಛೆಯನ್ನು ಪಡೆದುಕೊಂಡಿರುತ್ತೇನೆ. ಆರೋಪಿತನು ನನ್ನ ಜೊತೆ ಬಂದರೆ ನಮಾಜ್ಕೋರವರ ಗೋದಾಮಿನಲ್ಲಿಟ್ಟ 104 ಚೀಲ ಕರಿಮೆಣಸನ್ನು ತೋರಿಸುವುದಾಗಿ ಹೇಳಿರುತ್ತಾನೆ. ಸದರಿ ಸ್ವಇಚ್ಛೆ ಹೇಳಿಕೆಯ ಭಾಗವನ್ನು ನಿಪಿ-34 ಎಂದು ಗುರುತಿಸಲಾಯಿತು. ಸಹಿಯನ್ನು ನಿಪಿ-34 ಎ ಎಂದು ಗುರುತಿಸಲಾಯಿತು.

ದಿ:7.7.2017 ರಂದು ಸದರಿ ಆರೋಪಿಯ ಜೊತೆ ಚೆನ್ನನಕೋಟೆಯ 3 ನೇ ಆರೋಪಿತನಿಗೆ ಸೇರಿದ ಕರಿಮೆಣಸಿನ ಗೋದಾಮಿಗೆ ಹೋಗಿ ಅಲ್ಲಿ ಚಾಸಾ:20 ಮತ್ತು 21 ನ್ನು ಬರಮಾಡಿಕೊಂಡು ಅವರಿಗೆ ಪ್ರಕರಣದ ವಿಚಾರವನ್ನು ತಿಳಿಸಿ ಅವರ ಸಮಕ್ಷಮ ಶಫೀಕ್ ರವರ ಅಂಗಡಿಯಲ್ಲಿ 7345 ಕೆಜಿ ಕರಿಮೆಣಸು ಒಟ್ಟು 104 ಚೀಲವನ್ನು ವಶಕ್ಕೆ ಪಡೆದಿರುತ್ತೇನೆ. ಸದರಿ ಮಹಜರನ್ನು ಈಗಾಗಲೇ ನಿಪಿ-20 ಎಂದು, ಸಾಕ್ಷಿದಾರರ ಸಹಿಯನ್ನು ನಿಪಿ-20 ಸಿ ಎಂದು ಗುರುತಿಸಲ್ಪಾಯಿತು. ಸದರಿ 104 ಚೀಲಗಳ ಮೇಲೆ ಹಸಿರು ಬಣ್ಣದ ಶಾಯಿಯಿಂದ ಕ್ರಮಾಂಕಗಳನ್ನು ಗುರುತಿಸಿ ಮಾಲುಪಟ್ಟಿಗೆ ಅಳವಡಿಸಿರುತ್ತೇನೆ. ನಿಪಿ-6 ಮತ್ತು 7 ರಲ್ಲಿರುವ ಚೀಲಗಳನ್ನು ಸಾಕ್ಷಿನೋಡಿ ಗುರುತಿಸಿರುತ್ತಾರೆ. ಘಟನಾ ಸ್ಥಳದ ಛಾಯುಚಿತ್ರಗಳನ್ನು ಸಾಕ್ಷಿ ನೋಡಿ ಗುರುತಿಸುತ್ತಾರೆ. ಅದನ್ನು ಈಗಾಗಲೇ ನಿಪಿ-22 ರಿಂದ 24 ಎಂದು ಗುರುತಿಸಲಾಗಿದೆ. ದಿ:13.7.17 ರಂದು ಚಾಸಾ:28 ರಿಂದ 33 ರ ಹೇಳಿಕೆಗಳನ್ನು ಮಾಡಿಕೊಂಡಿರುತ್ತೇನೆ. ವರ್ಗಾವಣೆಯಾದ ಕಾರಣ ಮುಂದಿನ ತನಿಖೆಯನ್ನು ಚಾಸಾ:37 ರವರಿಗೆ ನೀಡಿರುತ್ತೇನೆ. 1 ನೇ ಆರೋಪಿತ ಈ ದಿನ ನ್ಯಾಯಾಲಯದಲ್ಲಿರುತ್ತಾನೆ.

ಪಾಟೀಸವಾಲು: ಶ್ರೀ ಡಿಸಿಡಿ ವಕೀಲರಿಂದ:

ಚಾಸಾ:30 ಅನಿಲ್ಕುಮಾರ್ ಎನ್ನುವ ಸಿದ್ದಾಪುರ ಪೊಲೀಸ್ ಠಾಣೆಯ ಸಿಬ್ಬಂದಿಯ ಸಹಾಯದಿಂದ 1 ನೇ ಅರೋಪಿತ ಆತನೇ ಎಂದು ನಮ್ಮ ಸಿಬ್ಬಂದಿ ಗುರುತುಹಚ್ಚಿರುತ್ತಾರೆ. ಚಾಸಾ:30 ನನ್ನ ಮುಂದೆ 1 ನೇ ಆರೋಪಿತ ನನಗೆ ಪರಿಚಯವಿರುತ್ತಾನೆಂದು ಹೇಳಿಕೆ ನೀಡಿರುತ್ತಾನೆ. ಚಾಸಾ:30 ಎಂದಿಗೂ 1 ನೇ ಆರೋಪಿತನನ್ನು ಪಿರಿಯಪಟ್ಟಣಲ್ಲಿ ಬಂಧಿಸಿಲ್ಲ ಎಂದರೆ ಸರಿಯಲ್ಲ. ಸ್ವಇಚ್ಛೆ ಹೇಳಿಕೆಯನ್ನು 1 ನೇ ಆರೋಪಿನಿಂದ ಅವನ ಇಚ್ಚೆಗೆ ವಿರುದ್ದವಾಗಿ ಪಡೆಯಲಾಗಿದೆ ಎಂದರೆ ಸರಿಯಲ್ಲ. ಸ್ವಇಚ್ಛೆ ಹೇಳಿಕೆಯಲ್ಲಿರುವ ರೀತಿ 1 ನೇ ಆರೋಪಿತ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. ಮಾಲನ್ನು ವಶಕ್ಕೆ ಪಡೆದ ಗೋದಾಮು ರಶೀದ್ ಎಂಬುವವನಿಗೆ ಸೇರಿದ್ದು ಆದರೆ ಅವನನ್ನು ನಾನು ವಿಚಾರಣೆ ಮಾಡಿಲ್ಲ. 2 ನೇ ಆರೋಪಿತನು 1 ನೇ ಆರೋತನು ನನಗೆ ಸದರಿ ಮಾಲುಗಳನ್ನು ನೀಡಿದ ಎಂದು ನಾನು ಹೇಳಿದ ಮೇರೆಗೆ ಪ್ರತ್ಯೇಕವಾಗಿ ನಾನು ಅವನ ಹೇಳಿಕೆ ಪಡೆದಿಲ್ಲ. 2 ನೇ ಆರೋಪಿತನು ನಮಾಜ್ಓ ಎನ್ನುವ ಕರಿಮೆಣಸು ವ್ಯವಹಾರ ಮಾಡುವ ಗೋದಾಮು ಇದೆ ಎಂದರೆ ಸರಿ. ಸಿದ್ದಾಪಪುರ ಸುತ್ತಮುತ್ತ ದೊಡ್ಡ ಮಟ್ಟದ ಕರಿಮೆಣಸನ್ನು ಗ್ರಾಹಕರಿಂದ ಖರೀದಿ ಮಾಡುವ ವ್ಯವಹಾರನ್ನು 2 ನೇ ಆರೋಪಿತ ಮಾಡುತ್ತಾನೆ ಎಂದರೆ ಹೌದು ಆದರೆ ಎಷ್ಟು ಮೊತ್ತದ ವ್ಯವಹಾರ ಮಾಡುತ್ತಾನೆ ಗೊತ್ತಿಲ್ಲ. 1 ನೇ ಆರೋಪಿತನ ಹೇಳಿಕೆ ಮೇರೆಗೆ ನಾವು ಯಾವುದೇ ಕರಿಮೆಣಸಿನ ಚೀಲಗಳನ್ನು ವಶಕ್ಕೆ ಪಡೆದಿಲ್ಲ ಎಂದರೆ ಸರಿಯಲ್ಲ. 2 ನೇ ಆರೋಪಿತನು ಗ್ರಾಹಕರಿಂದ ಸಂಗ್ರಹಿಸಿ ಗೋದಾಮಿನಲ್ಲಿಟ್ಟ ಚೀಲಗಳನ್ನು ಆತನಿಂದ ಬಲವಂತವಾಗಿ ವಶಕ್ಕೆ ಪಡೆದಿದ್ದೇವೆ ಎಂದರೆ ಸರಿಯಲ್ಲ. ನಾವು ವಶಕ್ಕೆ ಪಡೆದ 104 ಚೀಲಗಳು ಕರಿಮೆಣಸು 2 ನೇ ಆರೋಪಿತನ ಮಾಲೀಕತ್ವಕ್ಕೆ ಸೇರುತ್ತದೆ ಎಂದರೆ ಸರಿಯಲ್ಲ. 1 ನೇ ಅರೋಪಿತನ ಹೇಳಿಕೆಯಂತೆ ನಾವು ಯಾವುದೇ ಮಾಲನ್ನು ವಶಕ್ಕೆ ಪಡೆದಿಲ್ಲ ಎಂದರೆ ಸರಿಯಲ್ಲ. ಪ್ರಕರಣಕ್ಕೆ ಅನುಕೂಲವಾಗುವಂತೆ ಮಹಜರನ್ನು ತಯಾರಿಸಲಾಗಿದೆ ಎಂದರೆ ಸರಿಯಲ್ಲ.

ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇ

(ಶಿವಾನಂದ್ ಲಕ್ಷ್ಮಣ್ ಅಂಚಿ)
ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ, ವಿರಾಜಪೇಟೆ